# ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002

## ಪ್ರಕರಣಗಳ ಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ:

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ವಿಧಾನ ಮಂಡಲದ ಮುಂದೆ ಮಂಡಿಸುವುದು
4. ಆರ್ಥಿಕ ನಿರ್ವಹಣಾ ತತ್ವಗಳು
5. ಆರ್ಥಿಕ ಪಾರದರ್ಶಕತೆಗಾಗಿ ಕ್ರಮಗಳು
6. ಪಾಲನೆಯನ್ನು ಜಾರಿಗೊಳಿಸುವುದಕ್ಕೆ ಕ್ರಮಗಳು
7. ನಿಯಮಗಳನ್ನು ರಚಿಸಲು ಅಧಿಕಾರ
8. ನಿಯಮಗಳನ್ನು ವಿಧಾನಮಂಡಲದ ಮುಂದೆ ಮಂಡಿಸುವುದು
9. ಸದ್ಭಾವನೆಯಿಂದ ಕೈಗೊಳ್ಳುವ ಕ್ರಮಕ್ಕೆ ರಕ್ಷಣೆ
10. ಇತರ ಕಾನೂನುಗಳ ಅನ್ವಯವು ಪ್ರತಿಷೇಧವಾಗಿರತಕ್ಕದ್ದಲ್ಲ
11. ತೊಂದರೆಗಳನ್ನು ನಿವಾರಿಸಲು ಅಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

ರಾಜ್ಯ ಸರ್ಕಾರವು, ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಕುರಿತು ಒಂದು ಶ್ವೇತ ಪತ್ರವನ್ನು 2000ದ ಮಾರ್ಚ್‌ನಲ್ಲಿ ಪ್ರಕಟಿಸಿತು. ಆ ತರುವಾಯ, ರಾಜಸ್ವ ಕೊರತೆಯನ್ನು ನಿವಾರಿಸುವುದು, ಆರ್ಥಿಕ ಕೊರತೆಯನ್ನು, ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡಾ 3 ರಷ್ಟಕ್ಕೆ ಕಡಿಮೆಮಾಡುವುದು, ಋಣದ ಪ್ರಮಾಣವನ್ನು ರಾಜ್ಯದ ಆಂತರಿಕ ಉತ್ಪನ್ನದ ಒಂದು ವಿವೇಚನಾಯುತ ಶೇಕಡಾವಾರಾಗಿ ಇರುವಂತೆ ನಿರ್ವಹಿಸುವುದು ಮತ್ತು ಅಭಿವೃದ್ಧಿ ವೆಚ್ಚವನ್ನು ಗರಿಷ್ಠ ಪ್ರಮಾಣದಲ್ಲಿ ಸಾಧಿಸುವುದು – ಈ ಸ್ಪಷ್ಟ ಧ್ಯೇಯಗಳನ್ನು ಒಳಗೊಂಡಂತೆ ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ಹಣಕಾಸಿನ ಸ್ಥಿರತೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಸಾಧಿಸುವ ಗುರಿಯನ್ನು ಹೊಂದಿದ್ದ 2001-02 ರಿಂದ 2004-05ರ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ರೂಪಿಸಲಾಯಿತು. ಮೇಲೆ ಹೇಳಿದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, 2002-03ನೇ ವರ್ಷದ ಬಜೆಟ್ಟಿನಲ್ಲಿ, ಆರ್ಥಿಕ ಹೊಣೆಗಾರಿಕೆ ವಿಧೇಯಕವೊಂದನ್ನು ತರುವ ಬಗ್ಗೆ ಒಂದು ಘೋಷಣೆಯನ್ನು ಮಾಡಲಾಗಿತ್ತು.

ಆರ್ಥಿಕ ಹೊಣೆಗಾರಿಕೆ ವಿಧೇಯಕದಲ್ಲಿ ಇತರ ವಿಷಯಗಳೊಂದಿಗೆ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲಾಗಿದೆ,-

(i) ನಿಯಮಿಸಲಾದ ಆರ್ಥಿಕ ಸೂಚಿಗಳಿಗಾಗಿ ನಾಲ್ಕು ವರ್ಷಗಳ ಆವರ್ತಕ ಗುರಿಯನ್ನು ನಿರೂಪಿಸುವ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು, ವಾರ್ಷಿಕ ಬಜೆಟ್ಟಿನೊಡನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಪ್ರತಿಯೊಂದು ಆರ್ಥಿಕ ವರ್ಷದಲ್ಲಿ ರಾಜ್ಯಸರ್ಕಾರವು ಮಂಡಿಸುವಂತೆ ಅಗತ್ಯಪಡಿಸುವುದು;

(ii) ಸರ್ಕಾರಕ್ಕೆ ಮಾರ್ಗದರ್ಶನ ನೀಡುವುದಕ್ಕಾಗಿ ಆರ್ಥಿಕ ನಿರ್ವಹಣಾ ತತ್ವಗಳನ್ನು ನಿರ್ದಿಷ್ಟಪಡಿಸುವುದು;

(iii) 2006ರ ಮಾರ್ಚ್ 31ರ ವೇಳೆಗೆ, ರಾಜಸ್ವ ಕೊರತೆಯನ್ನು ನಿವಾರಿಸಲು ಮತ್ತು ಆರ್ಥಿಕ ಕೊರತೆಯನ್ನು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡಾ 3 ರಷ್ಟಕ್ಕೆ ಕಡಿಮೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ರಾಜ್ಯಸರ್ಕಾರವನ್ನು ಅಗತ್ಯಪಡಿಸುವುದು;

(iv) ಆರ್ಥಿಕ ಕಾರ್ಯಾಚರಣೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಖಚಿತಪಡಿಸಿ ಕೊಳ್ಳಲು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ವಾರ್ಷಿಕ ಬಜೆಟನ್ನು ಸಿದ್ಧಪಡಿಸುವಲ್ಲಿ ಕನಿಷ್ಠ ಗೌಪ್ಯತೆಇರುವಂತೆ ನೋಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಅಗತ್ಯಪಡಿಸುವುದು.

(v) ವಾರ್ಷಿಕ ಬಜೆಟ್ಟು ಮತ್ತು ಬಜೆಟ್ಟನ್ನು ಮಂಡಿಸುವ ಕಾಲದಲ್ಲಿ ಘೋಷಿಸಿದ ಕಾರ್ಯನೀತಿಗಳು, ಮುಂಬರುವ ಮತ್ತು ಭಾವಿ ವರ್ಷಗಳಿಗಾಗಿನ ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ಧ್ಯೇಯಗಳಿಗೆ ಮತ್ತು ಗುರಿಗಳಿಗೆ ಸುಸಂಗತವಾಗಿರುವಂತೆ ಅಗತ್ಯಪಡಿಸುವುದು;

(vi) ಬಜೆಟ್ಟಿಗೆ ಸಂಬಂಧಿಸಿದಂತೆ, ಸ್ವೀಕೃತಿಗಳು ಮತ್ತು ವೆಚ್ಚದಲ್ಲಿಯ ಪ್ರವೃತ್ತಿಗಳ ಬಗ್ಗೆ ಹಣಕಾಸು ಸಚಿವರು ಅರ್ಧವಾರ್ಷಿಕ ಪರಿಶೀಲನೆ ಮಾಡುವುದು ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಅಂಥ ಪರಿಶೀಲನೆಯ ಫಲಿತಾಂಶಗಳನ್ನು ಮಂಡಿಸುವುದು;

(vii) ಶಾಸನದ ಅಡಿಯಲ್ಲಿ ರಾಜ್ಯ ಸರ್ಕಾರದ ಮೇಲಿರುವ ದಾಯಿತ್ವಗಳನ್ನು ಭರಿಸುವಲ್ಲಿ ಮಾಡಬಹುದಾದ ಯಾವುದೇ ಬದಲಾವಣೆಯನ್ನು ವಿವರಿಸಿ ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಹೇಳಿಕೆ ನೀಡುವಂತೆ ಹಣಕಾಸು ಸಚಿವರನ್ನು ಅಗತ್ಯಪಡಿಸುವುದು;

(viii) ರಾಷ್ಟ್ರೀಯ ಭದ್ರತೆಯ ಅಥವಾ ಹಿಂದೆಂದೂ ಸಂಭವಿಸಿಲ್ಲದಂಥ ನೈಸರ್ಗಿಕ ವಿಕೋಪಗಳ ಕಾರಣದಿಂದಾಗಿ ಉಂಟಾದ ಅನಿರೀಕ್ಷಿತ ಬೇಡಿಕೆಗಳನ್ನು ಭರಿಸಬೇಕಾದ ಸಂದರ್ಭದಲ್ಲಿ ಕೊರತೆಯನ್ನು ಕಡಿಮೆಮಾಡುವ ಗುರಿಗಳಿಂದ ವಿನಾಯಿತಿ ನೀಡುವುದು.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 28)

## II

**2009ರ ಸಂಖ್ಯೆ 6.- 2008-09**ನೇ ಸಾಲಿನಲ್ಲಿ ಆರ್ಥಿಕ ಕೊರತೆಯ ಪರಿಮಿತಿಯನ್ನು ಒಂದು ಸಲದ ಸಡಿಲಗೊಳಿಸುವಿಕೆಯಾಗಿ ಮತ್ತು ಆರ್ಥಿಕ ಉತ್ತೇಜನದ ಪ್ಯಾಕೇಜಿನ ಒಂದು ಭಾಗವಾಗಿ ಬಂಡವಾಳ ವೆಚ್ಚಗಳನ್ನು ಭರಿಸುವುದಕ್ಕಾಗಿ ಅಂದಾಜು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾ 3.5ಕ್ಕೆ ಏರಿಸುವುದಕ್ಕಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 22, ಕಡತ ಸಂಖ್ಯೆ: 16 ಶಾಸನ 2009]

[ಭಾರತ ಸಂವಿಧಾನದ 283ನೇ ಅನುಚ್ಛೇದದ ಖಂಡ 2ರ ಅಡಿಯಲ್ಲಿ ಬರುತ್ತದೆ.]

## III

**2009ರ ಅಧಿನಿಯಮ ಸಂಖ್ಯೆ 14.- 2009-10**ನೇ ಸಾಲಿನಲ್ಲಿ ಆರ್ಥಿಕ ಕೊರತೆಯ ಮಿತಿಯನ್ನು ಒಂದು ಸಲದ ನಿಯಮ ಸಡಿಲಿಕೆಯಾಗಿ ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ 4ಕ್ಕೆ ಏರಿಸುವುದಕ್ಕಾಗಿ ಕರ್ನಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 35, ಕಡತ ಸಂಖ್ಯೆ:35 ಶಾಸನ 2009]

[ಭಾರತ ಸಂವಿಧಾನದ 283ನೇ ಅನುಚ್ಛೇದದ ಖಂಡ 2ರ ಅಡಿಯಲ್ಲಿ ಬರುತ್ತದೆ.]

## IV

**2011ರ ಅಧಿನಿಯಮ ಸಂಖ್ಯೆ 13.-** ರಾಜ್ಯಕ್ಕೆ ನಿರ್ಧಿಷ್ಟ ಅನುದಾನಗಳನ್ನು ಬಿಡುಗಡೆ ಮಾಡಲು ಮತ್ತು ಸಾಲ ಪರಿಹಾರ ಕ್ರಮಗಳಿಗಾಗಿ ಪೂರ್ವ ನಿದರ್ಶನ ಷರತ್ತಿನಂತೆ XIII ನೇ ಹಣಕಾಸು ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಭಾರತ ಸರ್ಕಾರವು ನಿಯಮಿಸಲಾದ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನಸಭೆಯ ವಿಧೇಯಕ ಸಂಖ್ಯೆ:13, ಕಡತ ಸಂಖ್ಯೆ:ಸಂವ್ಯಶಾಇ 11 ಶಾಸನ 2011]

[ಭಾರತದ ಸಂವಿಧಾನದ ಅನುಚ್ಛೇದ 283ರ ಖಂಡ (2)ರ ಅಡಿಯಲ್ಲಿ ಬರುತ್ತದೆ.]

## V

**2014ರ ಅಧಿನಿಯಮ ಸಂಖ್ಯೆ 17.–**ಈ ಮುಂದಿನವುಗಳಿಗಾಗಿ, ಎಂದರೆ:–

(ಎ) ಆರ್ಥಿಕ ಹೊಣೆಗಾರಿಕೆ ಹಾಗೂ ಆಯವ್ಯಯ ನಿರ್ವಹಣೆ ಅಧಿನಿಯಮ, 2003ರ (ಕೇಂದ್ರ ಅಧಿನಿಯಮ, 39) ಹಾಗೂ ಹಣಕಾಸು ಆಯೋಗದ ವರದಿಗಳ ಅನ್ವಯ ಆರ್ಥಿಕ ಕೊರತೆಯನ್ನು ಪರಿಭಾಷಿಸುವುದಕ್ಕಾಗಿ ಅಧಿನಿಯಮದ 2ನೇ ಪ್ರಕರಣದ (ಸಿ) ಖಂಡದಲ್ಲಿನ (ii)ನೇ ಬಾಬು ಹಾಗೂ ಅದರ ಅಡಿಯಲ್ಲಿಯ ವಿವರಣೆಯನ್ನು ಬಿಟ್ಟುಬಿಡುವ ಮೂಲಕ "ಆರ್ಥಿಕ ಕೊರತೆ" ಯನ್ನು ಪುನರ್ ಪರಿಭಾಷಿಸುವುದಕ್ಕಾಗಿ; ಹಾಗೂ

(ಬಿ) ಋಣಭಾರದ ನೈಜ ಚಿತ್ರಣವನ್ನು ನೀಡಲು ಅಧಿನಿಯಮದ 2ನೇ ಪ್ರಕರಣದ (ಜಿ) ಖಂಡದಲ್ಲಿನ "ಒಟ್ಟು ದಾಯಿತ್ವಗಳು" ಪದದ ಪರಿಭಾಷೆಯಲ್ಲಿ, ರಾಜ್ಯ ಸರ್ಕಾರದ ಆಯವ್ಯಯದಿಂದ ಮರುಸಂದಾಯ ಮಾಡಬೇಕಾಗಿರುವ ಆಯವ್ಯಯದಲ್ಲಿ ಇರದ ಸಾಲಗಳನ್ನು ಸೇರಿಸುವುದಕ್ಕಾಗಿ,

– ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

(2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:39, ಕಡತ ಸಂಖ್ಯೆ:ಸಂವ್ಯಶಾಇ 08 ಶಾಸನ 2014)

## VI

**ತಿದ್ದುಪಡಿ ಅಧಿನಿಯಮ ಸಂಖ್ಯೆ 2020ರ 21.–** 2020–21ರ ಆರ್ಥಿಕ ವರ್ಷದಲ್ಲಿ ಏಕಕಾಲಿಕ ಸಡಿಲಿಕೆಯಾಗಿ ರಾಜ್ಯದ ಆರ್ಥಿಕ ಕೊರತೆಯನ್ನು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟಕ್ಕೆ ಹೆಚ್ಚಿಸಲು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ (2002ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 53, ಕಡತ ಸಂಖ್ಯೆ: ಸಂವ್ಯಶಾಇ 63 ಶಾಸನ 2020]

[ಭಾರತ ಸಂವಿಧಾನದ 283ನೇ ಅನುಚ್ಛೇದದ ಖಂಡ 2ರ ಅಡಿಯಲ್ಲಿ ಬರುತ್ತದೆ.]

## VII

**2021ರ ಅಧಿನಿಯಮ ಸಂಖ್ಯೆ 15.-** ಈ ಮುಂದಿನವುಗಳನ್ನು ಉಪಬಂಧಿಸುವುದಕ್ಕಾಗಿ,-

(i) 2021-22 ನೇ ವರ್ಷದಲ್ಲಿ ಆರ್ಥಿಕ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ನಾಲ್ಕರಷ್ಟರವರೆಗೆ ಉದ್ಭವಿಸುವುದು;

(ii) 2021-22 ನೇ ವರ್ಷದ ಅವಧಿಯಲ್ಲಿ ಕೋವಿಡ್-19ರ ಪೂರ್ವ ಹಂತಗಳಿಗೆ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜಸ್ವ ಕೊರತೆಯು ಉದ್ಭವಿಸಬಹುದು;

(iii) 2021-22ನೇ ವರ್ಷದ ಒಟ್ಟು ಹೊಣೆಗಾರಿಕೆಗಳು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು;

-ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 18, ಕಡತ ಸಂಖ್ಯೆ: ಸಂವ್ಯಶಾಇ 15 ಶಾಸನ 2021]

[ಭಾರತ ಸಂವಿಧಾನದ 283ನೇ ಅನುಚ್ಛೇದದ ಖಂಡ (2)ರ ನಮೂದನೆಯಡಿಯಲ್ಲಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 317 ದಿನಾಂಕ: 29.03.2021ರಲ್ಲಿ ಪ್ರಕಟಣೆಗೊಂಡಿದೆ]

## VIII

**2022ರ ತಿದ್ದುಪಡಿ ಅಧಿನಿಯಮ ಸಂಖ್ಯೆ:17** ಈ ಮುಂದಿನವುಗಳನ್ನುಉಪಬಂಧಿಸುವುದಕ್ಕಾಗಿ-,

(i) 2022-23 ನೇ ವರ್ಷದಲ್ಲಿ ಆರ್ಥಿಕ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 3.5 ರಷ್ಟರವರೆಗೆ ಹೆಚ್ಚಿಸಲು;

(ii) 2022-23ನೇ ವರ್ಷದ ಅವಧಿಯಲ್ಲಿ ಸ್ವೀಕೃತಿಗಳ ಇಳಿಕೆಯ ಕಾರಣದಿಂದಾಗಿ ರಾಜಸ್ವ ಕೊರತೆಯು ಉದ್ಭವಿಸಬಹುದು; ಮತ್ತು

(iii) 2022-23ನೇ ವರ್ಷದ ಒಟ್ಟು ಹೊಣೆಗಾರಿಕೆಗಳು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು;

- ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ (2002ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ,

[2022ರ ವಿಧಾನಸಭೆಯ ವಿಧೇಯಕ ಸಂಖ್ಯೆ:09, ಕಡತ ಸಂಖ್ಯೆ:ಸಂವ್ಯಶಾಇ 07 ಶಾಸನ 2022]

[ಭಾರತ ಸಂವಿಧಾನದ ಅನುಚ್ಛೇದ 283ರ ಖಂಡ (2)ರಡಿ ಬರುತ್ತದೆ.]

[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:211, ದಿನಾಂಕ:31.03.2022 ರಲ್ಲಿ ಪ್ರಕಟಗೊಂಡಿದೆ]

**2002ರ ಕರ್ನಾಟಕ ಅಧಿನಿಯಮ ಸಂಖ್ಯೆ 16**

2002ರ ಆಗಸ್ಟ್ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)

**ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002**

2002ರ ಆಗಸ್ಟ್ ಇಪ್ಪತ್ತೇಳನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

(2009ರ ಅಧಿನಿಯಮ ಸಂಖ್ಯೆ 6,14, 2011ರ 13, 2014ರ 17, 2020ರ 21, 2021ರ 15 ಮತ್ತು 2022ರ 17ರಲ್ಲಿ ತಿದ್ದುಪಡಿಯಾದಂತೆ)

ರಾಜ್ಯ ಸರ್ಕಾರದ ಸಾಲಗಳು, ಋಣಗಳು ಮತ್ತು ಕೊರತೆಗಳ ಮೇಲೆ ಮಿತಿಯನ್ನು ವಿಧಿಸಿ, ರಾಜ್ಯ ಸರ್ಕಾರದ ಆರ್ಥಿಕ ಕಾರ್ಯಾಚರಣೆಗಳಲ್ಲಿ ಹೆಚ್ಚು ಪಾರದರ್ಶಕತೆಯನ್ನು ತಂದು ಮತ್ತು ಮಧ್ಯಮಾವಧಿ ಆರ್ಥಿಕ ರೂಪರೇಷಗಳನ್ನು ಬಳಸಿಕೊಂಡು ರಾಜಸ್ವದಲ್ಲಿ ಸಾಕಷ್ಟು ಹೆಚ್ಚಳವನ್ನು ಸಾಧಿಸುವ ಮೂಲಕ, ಆರ್ಥಿಕ ಕೊರತೆಯನ್ನು ತಗ್ಗಿಸುವ ಮೂಲಕ ಮತ್ತು ಆರ್ಥಿಕ ಕಾರ್ಯನೀತಿಯನ್ನು ಪರಿಣಾಮಕಾರಿಯಾಗಿ ಹಾಗೂ ಋಣ ನಿರ್ವಹಣೆಯನ್ನು ವಿವೇಚನಾಯುತವಾಗಿ ನಿರ್ವಹಿಸುವಲ್ಲಿನ ಅಡೆತಡೆಗಳನ್ನು ನಿವಾರಿಸುವ ಮೂಲಕ, ಹಣಕಾಸಿನ ಸ್ಥಿರತೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳುವ ಹಾಗೂ ಸಾಮಾಜಿಕ ಮತ್ತು ಭೌತಿಕ ಮೂಲ ಸೌಲಭ್ಯಗಳನ್ನು ಮತ್ತು ಮಾನವ ಅಭಿವೃದ್ಧಿಯನ್ನು ಹೆಚ್ಚಿಸುವ ಅವಕಾಶವನ್ನು ವಿಸ್ತರಿಸುವ ಸಂಬಂಧದಲ್ಲಿ ರಾಜ್ಯ ಸರ್ಕಾರದ ಹೊಣೆಗಾರಿಕೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ರಾಜ್ಯ ಸರ್ಕಾರದ ಸಾಲಗಳು, ಋಣಗಳು ಮತ್ತು ಕೊರತೆಗಳ ಮೇಲೆ ಮಿತಿಯನ್ನು ವಿಧಿಸಿ, ರಾಜ್ಯ ಸರ್ಕಾರದ ಆರ್ಥಿಕ ಕಾರ್ಯಾಚರಣೆಗಳಲ್ಲಿ ಹೆಚ್ಚು ಪಾರದರ್ಶಕತೆಯನ್ನು ತಂದು ಮತ್ತು ಮಧ್ಯಮಾವಧಿ ಆರ್ಥಿಕ ರೂಪರೇಷಗಳನ್ನು ಬಳಸಿಕೊಂಡು ರಾಜಸ್ವದಲ್ಲಿ ಸಾಕಷ್ಟು ಹೆಚ್ಚಳವನ್ನು ಸಾಧಿಸುವ ಮೂಲಕ, ಆರ್ಥಿಕ ಕೊರತೆಯನ್ನು ತಗ್ಗಿಸುವ ಮೂಲಕ ಮತ್ತು ಆರ್ಥಿಕ ಕಾರ್ಯನೀತಿಯನ್ನು ಪರಿಣಾಮಕಾರಿಯಾಗಿ ಹಾಗೂ ಋಣ ನಿರ್ವಹಣೆಯನ್ನು ವಿವೇಚನಾಯುತವಾಗಿ ನಿರ್ವಹಿಸುವಲ್ಲಿನ ಅಡೆತಡೆಗಳನ್ನು ನಿವಾರಿಸುವ ಮೂಲಕ, ಹಣಕಾಸಿನ ಸ್ಥಿರತೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳುವ ಹಾಗೂ ಸಾಮಾಜಿಕ ಮತ್ತು ಭೌತಿಕ ಮೂಲ ಸೌಲಭ್ಯಗಳನ್ನು ಮತ್ತು ಮಾನವ ಅಭಿವೃದ್ಧಿಯನ್ನು ಹೆಚ್ಚಿಸುವ ಅವಕಾಶವನ್ನು ವಿಸ್ತರಿಸುವ ಸಂಬಂಧದಲ್ಲಿ ರಾಜ್ಯ ಸರ್ಕಾರದ ಹೊಣೆಗಾರಿಕೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಐವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು ಸಮಗ್ರ ಕರ್ನಾಟಕಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದಂತೆ ಅಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 1262 ದಿನಾಂಕ: 30.8.2002ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 34 ಶಾಸನ 2002.

1. ಅಧಿನಿಯಮವು ದಿನಾಂಕ: 1.4.2003 ರಿಂದ ಅಧಿಸೂಚನೆ ಮೂಲಕ ಜಾರಿಗೆ ಬಂದಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ವಾರ್ಷಿಕ ಬಜೆಟ್" ಎಂದರೆ, ಸಂವಿಧಾನದ 202ನೇ ಅನುಚ್ಛೇದದ ಅಡಿಯಲ್ಲಿ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲಾದ ವಾರ್ಷಿಕ ಆರ್ಥಿಕ ವಿವರಣಪತ್ರ;

(ಬಿ) "ಪ್ರಸಕ್ತ ವರ್ಷ" ಎಂದರೆ, ಯಾವ ವರ್ಷಕ್ಕಾಗಿ ಬಜೆಟ್ಟನ್ನು ಮತ್ತು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು (ಎಮ್‌ಟಿಎಫ್‌ಪಿ) ಮಂಡಿಸಲಾಗುತ್ತದೆಯೋ ಆ ವರ್ಷದ ಹಿಂದಿನ ವರ್ಷ;

(ಸಿ) "ಆರ್ಥಿಕ ಕೊರತೆ" ಎಂದರೆ,-

(i) ಒಂದು ಆರ್ಥಿಕ ವರ್ಷದಲ್ಲಿ ರಾಜ್ಯ ಸಂಚಿತ ನಿಧಿಯಿಂದ ಮಾಡಲಾದ (ಋಣ ಮರು ಸಂದಾಯವನ್ನು ಹೊರತುಪಡಿಸಿ) ಒಟ್ಟು ಬಟವಾಡೆಗಳು, ಋಣ ಸ್ವೀಕೃತಿಗಳನ್ನು ಹೊರತುಪಡಿಸಿ ನಿಧಿಯಲ್ಲಿಯ ಒಟ್ಟು ಜಮೆಗಳಿಗಿಂತ ಹೆಚ್ಚಿಗೆಯಾಗಿರುವುದು; ಅಥವಾ

(ii) [1][XXX][1]

1. 2014ರ ಅಧಿನಿಯಮ ಸಂಖ್ಯೆ 17ರ ಪ್ರಕರಣ 2ರ ಮೂಲಕ ದಿನಾಂಕ: 28.02.2014ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) "ಆರ್ಥಿಕ ಸೂಚಿಗಳು" ಎಂದರೆ, ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯ ಮೌಲ್ಯಮಾಪನಕ್ಕಾಗಿ ನಿಯಮಿಸಬಹುದಾದಂತೆ, ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಸಂಬಂಧದಲ್ಲಿ ಸಂಖ್ಯಾ ಪರಮಾವಧಿಮಿತಿ ಹಾಗೂ ಅನುಪಾತದಂಥ ಕ್ರಮಗಳು;

(ಇ) "ಹಿಂದಿನ ವರ್ಷ" ಎಂದರೆ, ಪ್ರಸಕ್ತ ವರ್ಷದ ಹಿಂದಿನ ವರ್ಷ;

(ಎಫ್) "ರಾಜಸ್ವ ಕೊರತೆ" ಎಂದರೆ, ರಾಜಸ್ವ ವೆಚ್ಚ ಮತ್ತು ರಾಜಸ್ವ ಸ್ವೀಕೃತಿಗಳ ನಡುವಿನ ವ್ಯತ್ಯಾಸ.

**ವಿವರಣೆ:-** ಈ ಖಂಡದ ಉದ್ದೇಶಕ್ಕಾಗಿ, ಸಾರ್ವಜನಿಕ ವಲಯ ಉದ್ಯಮಗಳ ಹಾಗೂ ವಿಶೇಷ ಉದ್ದೇಶ ಘಟಕಗಳ (ಸ್ಪೆಷಲ್ ಪರ್ಪಸ್ ವೆಹಿಕಲ್ಸ್) ಮತ್ತು ಇತರ ಅಂಥಹವೇ ವಿಧಾನಗಳ ಮೂಲಕ ಮಾಡಲಾದ ಯಾವ ಸಾಲಗಳ ಮರುಸಂದಾಯದ ದಾಯಿತ್ವವು ಸರ್ಕಾರದ್ದಾಗಿದೆಯೋ ಅವುಗಳಿಗಾಗಿ ಸರ್ಕಾರವು ಮಾಡುವ ಬಡ್ಡಿ ಸಂದಾಯವನ್ನು ರಾಜಸ್ವ ವೆಚ್ಚವೆಂದು ಪರಿಗಣಿಸತಕ್ಕದ್ದು.

(ಜಿ) "ಒಟ್ಟು ದಾಯಿತ್ವಗಳು" ಎಂದರೆ, ರಾಜ್ಯದ ಸಂಚಿತ ನಿಧಿಯ ಮತ್ತು ರಾಜ್ಯದ ಸಾರ್ವಜನಿಕ ಲೆಕ್ಕದ ಸಂಬಂಧದಲ್ಲಿ ಇರುವ ದಾಯಿತ್ವಗಳು. [1][ಹಾಗೂ ಸಾರ್ವಜನಿಕ ವಲಯ ಉದ್ಯಮಗಳು ಹಾಗೂ ವಿಶೇಷ ಉದ್ದೇಶ ಘಟಕಗಳು (ಸ್ಪೆಷಲ್ ಪರ್ಪಸ್ ವೆಹಿಕಲ್ಸ್) ಮತ್ತು ಇತರ ಅಂಥಹವೇ ಉದ್ಯಮಗಳು (ಇಕ್ವಿವಲಂಟ್ ಇನ್‌ಸ್ಟ್ರುಮೆಂಟ್ಸ್) ರಾಜ್ಯ ಆಯವ್ಯಯದಿಂದ ಅಸಲು ಮತ್ತು/ಅಥವಾ ಬಡ್ಡಿಗಾಗಿ ನೆರವನ್ನು ಪಡೆದು, ಮಾಡಲಾದ ಸಾಲಗಳನ್ನೂ ಇದು ಒಳಗೊಳ್ಳುತ್ತದೆ][1]

1. 2014ರ ಅಧಿನಿಯಮ ಸಂಖ್ಯೆ 17ರ ಪ್ರಕರಣ 2ರ ಮೂಲಕ ದಿನಾಂಕ: 28.02.2014ರಿಂದ ಜಾರಿಗೆ ಬರುವಂತೆ ಸೇರಿಸಿದೆ.

**3. ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ವಿಧಾನ ಮಂಡಲದ ಮುಂದೆ ಮಂಡಿಸುವುದು.-** (1) ರಾಜ್ಯ ಸರ್ಕಾರವು ಪ್ರತಿಯೊಂದು ಆರ್ಥಿಕ ವರ್ಷದಲ್ಲಿ, ವಾರ್ಷಿಕ ಬಜೆಟ್ಟಿನೊಂದಿಗೆ ಒಂದು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

(2) ಮಧ್ಯಮಾವಧಿ ಆರ್ಥಿಕ ಯೋಜನೆಯು, ಇದರಲ್ಲಿ ಒಳಗೊಂಡಿರುವ ಪೂರ್ವ ಭಾವನೆಗಳ ನಿರ್ದಿಷ್ಟ ಗುಣಲಕ್ಷಣಗಳನ್ನು ಹಾಗೂ ನಿಯಮಿಸಲಾದ ಆರ್ಥಿಕ ಸೂಚಿಗಳ ನಾಲ್ಕು ವರ್ಷಗಳ ಆವರ್ತಕ ಗುರಿಯನ್ನು ನಿರೂಪಿಸತಕ್ಕದ್ದು.

(3) ವಿಶೇಷವಾಗಿ ಮತ್ತು (2)ನೇ ಉಪಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಮಧ್ಯಮಾವಧಿ ಆರ್ಥಿಕ ಯೋಜನೆಯು,-

(i) ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚಗಳ ನಡುವಿನ ಶಿಲ್ಕಿಗೆ;

(ii) ಉತ್ಪಾದಕ ಸ್ವತ್ತುಗಳ ಸೃಜನೆಗಾಗಿ ಸಾಲಗಳೂ ಸೇರಿದಂತೆ ಬಂಡವಾಳ ಸ್ವೀಕೃತಿಗಳ ಬಳಕೆಗೆ

- ಸಂಬಂಧಪಡುವ ನಿರ್ವಹಣಾ ಸಾಮರ್ಥ್ಯದ ನಿರ್ಧಾರಣೆಯನ್ನು ಒಳಗೊಳ್ಳತಕ್ಕದ್ದು.

(4) ಮಧ್ಯಮಾವಧಿ ಆರ್ಥಿಕ ಯೋಜನೆಯು, ಇತರ ವಿಷಯಗಳೊಂದಿಗೆ, ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು.-

(ಎ) ರಾಜ್ಯ ಸರ್ಕಾರದ ಮಧ್ಯಮಾವಧಿ ಆರ್ಥಿಕ ಧ್ಯೇಯಗಳು;

(ಬಿ) ಹಿಂದಿನ ವರ್ಷದಲ್ಲಿ ನಿಯಮಿಸಲಾದ ಆರ್ಥಿಕ ಸೂಚಿಗಳು ಹಾಗೂ ಇವುಗಳಿಗೆ ಪ್ರತಿಯಾಗಿ ಈ ಮೊದಲು ವಿಧಿಸಲಾಗಿದ್ದ ಗುರಿಗಳ ನಿರ್ವಹಣೆಯ ಮೌಲ್ಯಮಾಪನ ಮತ್ತು ಪರಿಷ್ಕೃತ ಅಂದಾಜುಗಳ ಪ್ರಕಾರ ಪ್ರಸಕ್ತ ವರ್ಷದ ಸಂಭವನೀಯ ನಿರ್ವಹಣೆ;

(ಸಿ) ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರುವ ಇತ್ತೀಚಿನ ಅರ್ಥವ್ಯವಸ್ಥೆಯ ಪ್ರವೃತ್ತಿಗಳ ಹಾಗೂ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಭಾವಿ ನಿರೀಕ್ಷೆಗಳ ವಿವರಣಪಟ್ಟಿ;

(ಡಿ) ಮುಂಬರುವ ಹಣಕಾಸು ವರ್ಷಕ್ಕಾಗಿ, ಆರ್ಥಿಕ ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ಕಾರ್ಯತಂತ್ರದ ಆದ್ಯತೆಗಳು;

(ಇ) ಮುಂಬರುವ ಹಣಕಾಸು ವರ್ಷಕ್ಕಾಗಿ ತೆರಿಗೆಗಳು, ವೆಚ್ಚ, ಸಾಲಗಳು (ಸಾರ್ವಜನಿಕ ವಲಯ ಉದ್ಯಮಗಳ ಹಾಗೂ ವಿಶೇಷ ಉದ್ದೇಶ ಘಟಕಗಳ (ಸ್ಪೆಷಲ್ ಪರ್ಪಸ್ ವೆಹಿಕಲ್ಸ್) ಮತ್ತು ಇತರ ಅಂಥಹವೇ ವಿಧಾನಗಳ ಮೂಲಕ ಮಾಡಲಾದ ಯಾವ ಸಾಲಗಳ ಮರು ಸಂದಾಯದ ದಾಯಿತ್ವವು ರಾಜ್ಯ ಸರ್ಕಾರದ್ದಾಗಿದೆಯೋ ಮತ್ತು ಪ್ರತಿಯೊಂದು ಏಜನ್ಸಿಗಾಗಿ ಗರಿಷ್ಠ ಮಿತಿಯನ್ನು ನಿರ್ದಿಷ್ಟ ಪಡಿಸಲಾಗಿದೆಯೋ ಆ ಸಾಲವನ್ನು ಒಳ ಗೊಂಡಂತೆ) ಮತ್ತು ಇತರ ದಾಯಿತ್ವಗಳು, ಸಾಲನೀಡಿಕೆ ಮತ್ತು ಹಣ ಹೂಡಿಕೆಗಳು, ನಿಯಂತ್ರಿತ ಸರಕುಗಳ ಮತ್ತು ಸೇವೆಗಳ ಬೆಲೆ ಕಟ್ಟುವುದು ಮತ್ತು ನಿರ್ವಹಿಸಲಾಗುವ ಪ್ರಮುಖ ಬಜೆಟ್ ಇಂಗಿತವಿರುವ ಸಾರ್ವಜನಿಕ ವಲಯ ಉದ್ಯಮಗಳ ಭದ್ರತೆಗಳು ಮತ್ತು ಇತರ ಚಟುವಟಿಕೆಗಳೇ ಮುಂತಾದ ಇತರ ಚಟುವಟಿಕೆಗಳ ವಿವರಣೆ ಮತ್ತು ಇವುಗಳ ಪೈಕಿ ಪ್ರತಿಯೊಂದಕ್ಕೆ ಸಂಬಂಧಿಸಿದ, ಪ್ರಮುಖ ಆರ್ಥಿಕ ಕ್ರಮಗಳು ಹಾಗೂ ಗುರಿಗಳು;

(ಎಫ್) ರಾಜ್ಯ ಸರ್ಕಾರದ ಪ್ರಸಕ್ತ ಆರ್ಥಿಕ ಕಾರ್ಯನೀತಿಗಳು, 4ನೇ ಪ್ರಕರಣದಲ್ಲಿ ವಿವರಿಸಿದ ಆರ್ಥಿಕ ನಿರ್ವಹಣಾ ತತ್ವಗಳಿಗೆ ಮತ್ತು ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ವಿವರಿಸಿದ ಆರ್ಥಿಕ ಧ್ಯೇಯಗಳಿಗೆ ಹೇಗೆ ಸುಸಂಗತವಾಗಿವೆ ಎಂಬ ಬಗೆಗಿನ ಮೌಲ್ಯಮಾಪನ.

(5) ಮಧ್ಯಮಾವಧಿ ಆರ್ಥಿಕ ಯೋಜನೆಯು, ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿ ಇರತಕ್ಕದ್ದು.

**4. ಆರ್ಥಿಕ ನಿರ್ವಹಣಾ ತತ್ವಗಳು.-** (1) ರಾಜ್ಯ ಸರ್ಕಾರವು, ಈ ಮುಂದಿನ ಆರ್ಥಿಕ ನಿರ್ವಹಣಾ ತತ್ವಗಳ ಮೂಲಕ ಮಾರ್ಗದರ್ಶನ ಪಡೆಯುವುದು, ಎಂದರೆ:-

(ಎ) ವಿವೇಚನಾಯುತ ಹಂತಗಳಲ್ಲಿ ಸರ್ಕಾರದ ಋಣಗಳ ನಿರ್ವಹಣೆ ಮಾಡುವುದು;

(ಬಿ) ಭದ್ರತೆಗಳು ಮತ್ತು ಇತರ ಸಾದಿಲ್ವಾರು ದಾಯಿತ್ವಗಳನ್ನು, ಅಂಥ ದಾಯಿತ್ವಗಳ ಗುಣಮಟ್ಟ ಮತ್ತು ಹಂತಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ ವಿವೇಚನೆಯಿಂದ ನಿರ್ವಹಿಸುವುದು;

(ಸಿ) ಸರ್ಕಾರದ ಕಾರ್ಯನೀತಿ ತೀರ್ಮಾನಗಳು ಭಾವೀ ತಲೆಮಾರುಗಳ ಮೇಲೆ ಬೀರುವ ಆರ್ಥಿಕ ಪ್ರಭಾವಗಳ ಬಗ್ಗೆ ಸೂಕ್ತ ಗಮನ ನೀಡುವ ಬಗ್ಗೆ ಖಚಿತಪಡಿಸಿ ಕೊಳ್ಳುವುದು;

(ಡಿ) ಸಾಲಗಳನ್ನು ಉತ್ಪಾದಕ ಉದ್ದೇಶಗಳಿಗಾಗಿ ಮತ್ತು ಬಂಡವಾಳ ಸ್ವತ್ತುಗಳ ಸಂಗ್ರಹಣೆಗಾಗಿ ಉಪಯೋಗಿಸಿಕೊಳ್ಳಲಾಗಿದೆ ಹಾಗೂ ಪ್ರಸಕ್ತ ವೆಚ್ಚಕ್ಕಾಗಿ ಹಣಒದಗಿಸಲು ವಿನಿಯೋಗಿಸಿಕೊಳ್ಳಲಾಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದು;

(ಇ) ತೆರಿಗೆ ಹೊರೆಯ ಹಂತದಲ್ಲಿ ಸ್ಥಿರತೆ ಹಾಗೂ ಪೂರ್ವ ನಿರೀಕ್ಷೆಯ ಸಮಂಜಸ ಪ್ರಮಾಣವನ್ನು ಖಚಿತಪಡಿಸಿಕೊಳ್ಳುವುದು;

(ಎಫ್) ವಿಶೇಷ ಉತ್ತೇಜಕಗಳು, ರಿಯಾಯಿತಿಗಳು ಮತ್ತು ವಿನಾಯಿತಿಗಳನ್ನು ಕಡಿಮೆಮಾಡುವ ಮೂಲಕ ತೆರಿಗೆ ವ್ಯವಸ್ಥೆಯ ಸಮಗ್ರತೆಯನ್ನು ಕಾಯ್ದುಕೊಂಡು ಬರುವುದು;

(ಜಿ) ಆರ್ಥಿಕ ದಕ್ಷತೆ ಮತ್ತು ಪಾಲನೆ ವೆಚ್ಚಗಳಿಗೆ ಸೂಕ್ತ ಗಮನ ನೀಡಿ ತೆರಿಗೆ ಕಾರ್ಯನೀತಿಗಳನ್ನು ಅನುಸರಿಸುವುದು;

(ಹೆಚ್) ವೆಚ್ಚ ವಸೂಲಿಗೆ ಮತ್ತು ಇಕ್ವಿಟಿಗೆ ಸೂಕ್ತ ಗಮನ ನೀಡಿ ತೆರಿಗೆಯೇತರ ರಾಜಸ್ವ ಕಾರ್ಯನೀತಿಗಳನ್ನು ಪಾಲಿಸುವುದು;

(ಐ) ಆರ್ಥಿಕ ಬೆಳವಣಿಗೆ, ಬಡತನ ನಿವಾರಣೆ ಮತ್ತು ಮಾನವ ಕಲ್ಯಾಣದಲ್ಲಿ ಸುಧಾರಣೆ - ಇವುಗಳಿಗೆ ಚಾಲನ ಶಕ್ತಿಯನ್ನು ಒದಗಿಸುವ ವೆಚ್ಚ ಕಾರ್ಯನೀತಿಗಳನ್ನು ಅನುಸರಿಸುವುದು;

(ಜೆ) ಬಂಡವಾಳ ಸಂಗ್ರಹಣೆಯಲ್ಲಿ ಮತ್ತು ಉತ್ಪಾದಕ ವೆಚ್ಚಗಳಲ್ಲಿ ಉಪಯೋಗಿ ಸುವುದಕ್ಕಾಗಿ ರಾಜಸ್ವ ಹೆಚ್ಚಳವನ್ನು ವೃದ್ಧಿಪಡಿಸುವುದು;

(ಕೆ) ಸರ್ಕಾರದ ಭೌತಿಕ ಸ್ವತ್ತುಗಳನ್ನು ಸೂಕ್ತವಾಗಿ ನಿರ್ವಹಿಸುತ್ತಿರುವುದರ ಬಗ್ಗೆ ಖಚಿತಪಡಿಸಿಕೊಳ್ಳುವುದು;

(ಎಲ್) ಆರ್ಥಿಕ ಕಾರ್ಯನೀತಿಯ ನಿರ್ವಹಣೆಯನ್ನು ಮತ್ತು ಸಾರ್ವಜನಿಕ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ಸಾರ್ವಜನಿಕರಿಗೆ ಅವಕಾಶ ಕೊಡುವುದಕ್ಕಾಗಿ ಸಾಕಷ್ಟು ಮಾಹಿತಿಯನ್ನು ಬಹಿರಂಗಪಡಿಸುವುದು;

(ಎಮ್) ಹಣಕ್ಕೆ ಅತ್ಯುತ್ತಮ ಮೌಲ್ಯ ನೀಡುವ ರೀತಿಯಲ್ಲಿ ಸರ್ಕಾರವು ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವಂತೆ ಖಚಿತಪಡಿಸಿಕೊಳ್ಳುವುದು; ಮತ್ತು ಸಾರ್ವಜನಿಕ ಸ್ವತ್ತುಗಳನ್ನು ಸಾಧ್ಯವಾದಷ್ಟು ಅತ್ಯುತ್ತಮವಾಗಿ ಬಳಸಿಕೊಳ್ಳುವಂತೆ ಸಹ ನೋಡಿಕೊಳ್ಳುವುದು;

(ಎನ್) ಸಾರ್ವಜನಿಕ ವಲಯದ ಉದ್ಯಮಗಳನ್ನು ನಡೆಸುವುದಕ್ಕೆ ಮತ್ತು ಸಾರ್ವಜನಿಕ ಸರಕುಗಳನ್ನು ಮತ್ತು ಸೇವೆಗಳನ್ನು ಒದಗಿಸುವ ಸೇವಾಸಂಸ್ಥೆಗಳಿಗೆ ಸಂಬಂಧಿಸಿದ ಆರ್ಥಿಕ ಅಪಾಯಗಳನ್ನು ಕಡಿಮೆಮಾಡುವುದು;

(ಓ) ಸಂಗ್ರಹಿಸಲಾದ ರಾಜಸ್ವದ ಹಂತಕ್ಕೆ ಸುಸಂಗತವಾಗಿ ವೆಚ್ಚದ ನಿರ್ವಹಣೆ;

(ಪಿ) ಸಾಮಾನ್ಯ ಆರ್ಥಿಕ ರೂಪರೇಷೆಗಳಿಗೆ ಮತ್ತು ರಾಜಸ್ವ ನಿರೀಕ್ಷೆಗಳಿಗೆ ಸೂಕ್ತ ಗಮನ ನೀಡಿ ವಾಸ್ತವಿಕ ಮತ್ತು ವಸ್ತುನಿಷ್ಠ ರೀತಿಯಲ್ಲಿ ಬಜೆಟ್ಟನ್ನು ರೂಪಿಸುವುದು ಹಾಗೂ ವರ್ಷದ ಅವಧಿಯಲ್ಲಿ, ಇವುಗಳಲ್ಲಿ ಮಾಡಬಹುದಾದ ಬದಲಾವಣೆಯು ಕಡಿಮೆ ಇರುವಂತೆ ನೋಡಿಕೊಳ್ಳುವುದು;

(ಕ್ಯೂ) ಪ್ರಸಕ್ತ ದಾಯಿತ್ವಗಳ ತೀರಿಕೆಯ ಬಗ್ಗೆ ನಿಯಮಿತ ಕಾಲದೊಳಗೆ ಖಚಿತಪಡಿಸಿ ಕೊಳ್ಳುವುದು.

(2) ರಾಜ್ಯ ಸರ್ಕಾರವು, ರಾಜಸ್ವ ಕೊರತೆಯನ್ನು ನಿವಾರಿಸುವುದಕ್ಕೆ ಮತ್ತು ಆರ್ಥಿಕ ಕೊರತೆಯು ನಿರ್ವಹಣಾ ಸಾಮರ್ಥ್ಯದ ಹಂತಗಳೊಳಗಿರುವಂತೆ ತಡೆಯುವುದಕ್ಕೆ ಮತ್ತು ಸಾಕಷ್ಟು ಹೆಚ್ಚಿನ ರಾಜಸ್ವ ಸಂಗ್ರಹಣೆ ಮಾಡುವುದಕ್ಕೆ ಸೂಕ್ತ ಕ್ರಮಕೈಗೊಳ್ಳ ತಕ್ಕದ್ದು.

(3) ರಾಜ್ಯ ಸರ್ಕಾರವು, ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ,-

(ಎ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗುವ ಮೊದಲನೆ ಆರ್ಥಿಕ ವರ್ಷದಿಂದ 2006ರ ಮಾರ್ಚ್ 31ನೇ ದಿನಾಂಕದಂದು ಕೊನೆಗೊಳ್ಳುವ ವರ್ಷದ ವರೆಗಿನ ನಾಲ್ಕು ಆರ್ಥಿಕ ವರ್ಷಗಳ ಅವಧಿಯೊಳಗೆ ರಾಜಸ್ವ ಕೊರತೆಯು ಶೂನ್ಯ ವಾಗುವಂತೆ ಕಡಿಮೆಮಾಡುವುದು;

(ಬಿ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭಿಸಿ ಪ್ರತಿಯೊಂದು ಆರ್ಥಿಕ ವರ್ಷದಲ್ಲಿ, (ಎ) ಖಂಡದಲ್ಲಿ ಹೇಳಿದ ಗುರಿಗೆ ಸುಸಂಗತವಾದ ರೀತಿಯಲ್ಲಿ ರಾಜಸ್ವ ಕೊರತೆಯನ್ನು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇಕಡಾವಾರು ಪ್ರಮಾಣದಂತೆ ಕಡಿಮೆಮಾಡುವುದು;

(ಸಿ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗುವ ಮೊದಲನೇ ಆರ್ಥಿಕ ವರ್ಷದಿಂದ 2006ರ ಮಾರ್ಚ್ 31 ರಂದು ಕೊನೆಗೊಳ್ಳುವ ನಾಲ್ಕು ಆರ್ಥಿಕ ವರ್ಷಗಳ ಅವಧಿಯಲ್ಲಿ ಅಂದಾಜು ಮಾಡಲಾದ ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡಾ ಮೂರರ ಪ್ರಮಾಣಕ್ಕೆ ಹೆಚ್ಚಿಗೆಯಾಗದಂತೆ ಆರ್ಥಿಕ ಕೊರತೆಯನ್ನು ಕಡಿಮೆ ಮಾಡುವುದು;

(ಡಿ) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭಿಸಿ ಪ್ರತಿಯೊಂದು ಆರ್ಥಿಕ ವರ್ಷದಲ್ಲಿ, (ಸಿ) ಖಂಡದಲ್ಲಿ ಹೇಳಿದ ಗುರಿಗೆ ಸುಸಂಗತವಾದ ರೀತಿಯಲ್ಲಿ ಆರ್ಥಿಕ ಕೊರತೆಯನ್ನು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇಕಡಾವಾರು ಪ್ರಮಾಣದಂತೆ ಕಡಿಮೆಮಾಡುವುದು;

(ಇ) ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ವಿಧಿಸಲಾದ ಮಿತಿಯನ್ನು ಮೀರುವ ಯಾವುದೇ ಮೊಬಲಗಿಗಾಗಿ ಭದ್ರತೆಯನ್ನು ನೀಡತಕ್ಕದ್ದಲ್ಲ;

(ಎಫ್) 2002ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗುವ ಮೊದಲನೆ ಆರ್ಥಿಕ ವರ್ಷದಿಂದ 2015ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಹದಿಮೂರು ಆರ್ಥಿಕ ವರ್ಷಗಳ ಅವಧಿಯೊಳಗೆ, ಕೊನೆಯ ಆರ್ಥಿಕ ವರ್ಷದ ಅಂತ್ಯದಲ್ಲಿ ಒಟ್ಟು ದಾಯಿತ್ವಗಳು ಆ ವರ್ಷದ ಅಂದಾಜು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದನ್ನು ಮೀರದಂತೆ ನೋಡಿಕೊಳ್ಳುವುದು:

[1][(ಜಿ) 2010-11, 2011-12, 2012-13, 2013-14 ಮತ್ತು 2014-15 ಆರ್ಥಿಕ ವರ್ಷಗಳ ಕೊನೆಯಲ್ಲಿ ಬಾಕಿ ಇರುವ ಸಾಲವು ಅನುಕ್ರಮವಾಗಿ ಆ ವರ್ಷಗಳ ಅಂದಾಜು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾ 26.2, ಶೇಕಡಾ 26, ಶೇಕಡಾ 25.7, ಶೇಕಡಾ 25.4 ಮತ್ತು ಶೇಕಡಾ 25.2 ಇರುವಂತೆ ಖಚಿತಪಡಿಸಿಕೊಳ್ಳುವುದು.][1]

1. 2011ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 19.03.2011 ರಿಂದ ಸೇರಿಸಲಾಗಿದೆ.

ಪರಂತು, ರಾಜಸ್ವ ಕೊರತೆ ಮತ್ತು ಆರ್ಥಿಕ ಕೊರತೆಯು, ರಾಷ್ಟ್ರೀಯ ಭದ್ರತೆಗಾಗಿ ಅಥವಾ ನೈಸರ್ಗಿಕ ವಿಕೋಪಗಳಿಂದಾಗಿ, ರಾಜ್ಯಸರ್ಕಾರದ ಹಣಕಾಸಿನ ಮೇಲೆ ಅನಿರೀಕ್ಷಿತ ಬೇಡಿಕೆಯನ್ನುಂಟುಮಾಡುವ ಕಾರಣ ಅಥವಾ ಕಾರಣಗಳಿಂದಾಗಿ ಈ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಗಳನ್ನು ಮೀರಬಹುದು. ಆದರೆ ನೈಸರ್ಗಿಕ

ವಿಕೋಪಗಳಿಂದಾಗಿ ಮಿತಿಗಳನ್ನು ಮೀರಿ ಅಗಿರುವ ಹೆಚ್ಚುವರಿಗಳು, ಆ ವಿಕೋಪಗಳಿಂದ ಆಯಿತೆನ್ನಲಾದ ವಾಸ್ತವಿಕ ಆರ್ಥಿಕ ವೆಚ್ಚವನ್ನು ಮೀರತಕ್ಕದ್ದಲ್ಲವೆಂಬ ಷರತ್ತಿಗೊಳ ಪಟ್ಟಿರಬೇಕು.

[1][ಮತ್ತೂ ಪರಂತು, 2008-09ನೇಸಾಲಿನಲ್ಲಿ ಆರ್ಥಿಕ ಉತ್ತೇಜನದ ಪ್ಯಾಕೇಜಿನ ಒಂದು ಭಾಗವಾಗಿ ಆರ್ಥಿಕ ಕೊರತೆಯು ಈಗಿರುವ ಮಿತಿಯನ್ನು ಅಂದಾಜು ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 3.5ರಷ್ಟರವರೆಗೆ ಮೀರಬಹುದು. ಹಾಗೆ ಸಡಿಲಗೊಳಿಸಿದ ಪರಿಮಿತಿಗಳ ಅಡಿಯಲ್ಲಿ ಪಡೆದುಕೊಂಡ ಹೆಚ್ಚುವರಿ ಮಾರುಕಟ್ಟೆ ಸಾಲಗಳನ್ನು 2008-09ನೇ ವರ್ಷದಲ್ಲಿ ಬಂಡವಾಳ ವೆಚ್ಚಗಳನ್ನು ಕೈಗೊಳ್ಳಲು ಉಪಯೋಗಿಸಿಕೊಳ್ಳತಕ್ಕದ್ದು. ಅನುಸರಣಾ ಕ್ರಮವಾಗಿ ಅಂಥ ಬಂಡವಾಳ ವೆಚ್ಚದ ವಿವರಗಳು ಮತ್ತು ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಉಲ್ಲೇಖಿಸುವ ಒಂದು ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.][1]

1. 2009ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 28.02.2009 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

[1][ಅಲ್ಲದೆ ಪರಂತು, 2009-10ನೇ ಹಣಕಾಸು ವರ್ಷದಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ 4ರಷ್ಟನ್ನು ಮೀರತಕ್ಕದ್ದಲ್ಲ.][1]

1. 2009ರ ಅಧಿನಿಯಮ ಸಂಖ್ಯೆ 14ರ ಮೂಲಕ ದಿನಾಂಕ: 01.04.2009 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

[1][ಅಲ್ಲದೇ ಪರಂತು, 2010-11ನೇ ಸಾಲಿನ ಆರ್ಥಿಕ ಕೊರತೆಯು ಹಿಂಜರಿತ ಕ್ರಮಗಳ ಪ್ರತಿಯಾಗಿ ಮಿತಿಯನ್ನು ಮೀರಬಹುದು, ಆದರೆ ಅಂದಾಜು ಮಾಡಲಾದ ರಾಜ್ಯದ ಆಂತರಿಕ ಉತ್ಪನ್ನದ ಶೇ.3.44 ಕ್ಕಿಂತ ಹೆಚ್ಚಿರತಕ್ಕದ್ದಲ್ಲ. ಅನುಸರಣಾ ಕ್ರಮವಾಗಿ ಆ ಮೂಲಕ ತೆಗೆದುಕೊಂಡ ಕ್ರಮಗಳು ಮತ್ತು ವಹಿಸಿದ ವೆಚ್ಚದ ವಿವರಗಳೊಂದಿಗೆ ಒಂದು ವರದಿಯನ್ನು ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.][1]

1. 2011ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 19.03.2011 ರಿಂದ ಸೇರಿಸಲಾಗಿದೆ.

[1][ಮತ್ತು ಪರಂತು, 2020-21ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ.

ಅಲ್ಲದೆ ಪರಂತು, 2020-21ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್ ಸಾಂಕ್ರಾಮಿಕದ ಪರಿಣಾಮ ಸ್ವೀಕೃತಿಗಳು ಕಡಿತಗೊಂಡ ಕಾರಣ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು.][1]

1. 2020ರ ಅಧಿನಿಯಮ ಸಂಖ್ಯೆ 21ರ ಮೂಲಕ ದಿನಾಂಕ: 01.04.2020 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

[1][ಮತ್ತು ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ ನಾಲ್ಕರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್-19ರ ಪೂರ್ವದ ಹಂತಗಳಿಗೆ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು:

ಅಲ್ಲದೆ ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆಯು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈರಷ್ಟನ್ನು ಮೀರಬಹುದು.][1]

1. 2021ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 01.04.2021ರಿಂದ ಸೇರಿಸಲಾಗಿದೆ.

ಮತ್ತು ಪರಂತು, ಅಂಥ ಕೊರತೆಯ ಮೊಬಲಗು ಮೇಲೆ ಹೇಳಿದ ಮಿತಿಗಳನ್ನು ಮೀರಬಹುದಾದ ಸಂಭಾವ್ಯತೆ ಉಂಟಾದ ತರುವಾಯ ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಕಾರಣ ಅಥವಾ ಕಾರಣಗಳನ್ನು, ಸಂಭವನೀಯ ಹೆಚ್ಚುವರಿಗಳು ಮತ್ತು ಅವುಗಳಿಗೆ ಕಾರಣಗಳನ್ನು ತೋರಿಸುವ ವರದಿಯೊಡನೆ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

[1][ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ 3.5ರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್ ಮತ್ತು ಓಮೈಕ್ರಾನ್ ಪರಿಣಾಮದಿಂದ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು:

ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆಯು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈರಷ್ಟನ್ನು ಮೀರಬಹುದು.][1]

1. 2022ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 01.04.2022ರಿಂದ ಸೇರಿಸಲಾಗಿದೆ.

**5. ಆರ್ಥಿಕ ಪಾರದರ್ಶಕತೆಗಾಗಿ ಕ್ರಮಗಳು.-** (1) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ತನ್ನ ಆರ್ಥಿಕ ಕಾರ್ಯಾಚರಣೆಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಖಚಿತ ಪಡಿಸಿಕೊಳ್ಳಲು ಸೂಕ್ತಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ವಾರ್ಷಿಕ ಬಜೆಟಿನ ತಯಾರಿಕೆಯಲ್ಲಿ ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಕನಿಷ್ಠ ಗೌಪ್ಯತೆ ಇರುವಂತೆ ನೋಡಿಕೊಳ್ಳತಕ್ಕದ್ದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ, ರಾಜ್ಯಸರ್ಕಾರವು, ವಾರ್ಷಿಕ ಬಜೆಟ್‌ನ ಮಂಡನೆಯ ಸಮಯದಲ್ಲಿ, ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿನ ಒಂದು ಹೇಳಿಕೆಯಲ್ಲಿ ಈ ಮುಂದಿನವುಗಳನ್ನು ಬಹಿರಂಗಪಡಿಸತಕ್ಕದ್ದು-

(ಎ) ನಿಯಮಿಸಲಾದ ಆರ್ಥಿಕ ಸೂಚಿಗಳನ್ನು ಲೆಕ್ಕಇಡುವಲ್ಲಿ ಪರಿಣಾಮ ಬೀರುವ ಅಥವಾ ಪರಿಣಾಮ ಬೀರುವ ಸಂಭವವಿರುವ - ಲೆಕ್ಕ ತಯಾರಿಕೆ ಗುಣಮಟ್ಟಗಳು, ಕಾರ್ಯನೀತಿಗಳು ಮತ್ತು ಪದ್ಧತಿಗಳಲ್ಲಿ ಗಮನಾರ್ಹ ಬದಲಾವಣೆಗಳು;

(ಬಿ) ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಗೆ ಸುಸಂಗತವಾಗಿ, ಖಾತರಿಗಳ ಮೂಲಕ ಸೃಜಿಸಲಾದ ಸಾದಿಲ್ವಾರು ದಾಯಿತ್ವಗಳು, ಸಾರ್ವಜನಿಕ ವಲಯ ಉದ್ಯಮಗಳ ಹಾಗೂ ವಿಶೇಷ ಉದ್ದೇಶ ಘಟಕಗಳ (ಸ್ಪೆಷಲ್ ಪರ್ಪಸ್ ವೆಹಿಕಲ್ಸ್) ಮತ್ತು ಇತರ ಅಂಥಹವೇ ವಿಧಾನಗಳ ಮೂಲಕ ಮಾಡಲಾದ ಯಾವ ಸಾಲಗಳ ಮರುಸಂದಾಯದ ದಾಯಿತ್ವವು ಸರ್ಕಾರದ್ದಾಗಿದೆಯೋ ಅವುಗಳಿಂದ ಉಂಟಾಗುವ ವಾಸ್ತವಿಕ ಬಾಧ್ಯತೆಗಳು, ಪ್ರಸ್ತಾವಿಸಲಾದ ಆದರೆ ಹಣಹೊಂದಿಸಿಲ್ಲದ ರೆವಿನ್ಯೂ ಬೇಡಿಕೆಗಳು ಸೇರಿದಂತೆ ಸಂಭಾವ್ಯ ಬಜೆಟ್ ಇಂಗಿತಗಳನ್ನು ಹೊಂದಿರುವ ರಾಜ್ಯ ಸರ್ಕಾರವು ಮಾಡಿದ ಎಲ್ಲ ಕ್ಲೇಮುಗಳು ಮತ್ತು ಹೊಣೆಗಳು; ತೆರಿಗೆ ವೆಚ್ಚ; ಸೇವಾ ಸಂಸ್ಥೆಗಳು ಮತ್ತು ಉದ್ಯಮಗಳ ಮೂಲಕ ಸಾರ್ವಜನಿಕ ಸರಕುಗಳನ್ನು ಮತ್ತು ಸೇವೆಗಳನ್ನು ಒದಗಿಸುವಲ್ಲಿ ಭರಿಸಲಾದ ನಷ್ಟಗಳು ಹಾಗೂ ಬೃಹತ್ ಕಾಮಗಾರಿಗಳು ಮತ್ತು ಕರಾರುಗಳಿಗೆ ಸಂಬಂಧಪಟ್ಟಂತೆ ದಾಯಿತ್ವ ಹಾಗೂ ಸಹಾಯಧನ ಸಂದಾಯಗಳು; ಮತ್ತು 4ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಗುರಿಗಳು ಸೇರಿದಂತೆ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಅವುಗಳು ಬೀರುವ ಪರಿಣಾಮ.

[1][(ಸಿ) ತೆರಿಗೆ ವೆಚ್ಚ ಮತ್ತು ಅದರ ವಿಧಾನವು ಸ್ಪಷ್ಟವಾಗಿ; ಪ್ರಮುಖ ತೆರಿಗೆ ಪ್ರಸ್ತಾವದ ಅನುಸರಣಾ ಖರ್ಚುಗಳು; ಸಂಬಂಧಿತ ದಾಯಿತ್ವಗಳೊಂದಿಗೆ ಬಂಡವಾಳ ವೆಚ್ಚದ ರಾಜಸ್ವ ಪರಿಣಾಮಗಳು (ಆರ್‌ಸಿಸಿಇ); ಭೌತಿಕ ಮತ್ತು ಹಣಕಾಸು ಸ್ವತ್ತುಗಳು; ಖಾಲಿ ಸಾರ್ವಜನಿಕ ಭೂಮಿ ಮತ್ತು ಕಟ್ಟಡಗಳು; ಪ್ರಮುಖ ಕಾರ್ಯನೀತಿ ಬದಲಾವಣೆಯ ಭವಿಷ್ಯತ್ ವೆಚ್ಚದ ಬದ್ಧತೆಗಳು; ಸಾರ್ವಜನಿಕ ಖಾಸಗಿ ಪಾಲುದಾರಿಕೆಯಲ್ಲಿ ಸ್ಪಷ್ಟ ಮತ್ತು ಇಂಗಿತ ದಾಯಿತ್ವಗಳು; ಹಾಗೂ ಸ್ವೀಕೃತಿಗಳು ಮತ್ತು ವೆಚ್ಚಗಳ ಮುನ್ನಂದಾಜುಗಳಿಗೆ ಇತಿ ಮಿತಿಯ ಮೌಲ್ಯಗಳು ಹಾಗೂ ಯಾವ ಪರಿಮಿತಿಯೊಳಗೆ ಇವು ವ್ಯತ್ಯಾಸವಾದರೂ ಉಳಿದವು ಗುರಿಗಳಿಗೆ ಸುಸಂಗತವಾಗಿರುತ್ತವೆ.][1]

1. 2011ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 19.03.2011 ರಿಂದ ಸೇರಿಸಲಾಗಿದೆ.

**6. ಪಾಲನೆಯನ್ನು ಜಾರಿಗೊಳಿಸುವುದಕ್ಕೆ ಕ್ರಮಗಳು.-** (1) ವಾರ್ಷಿಕ ಬಜೆಟ್ ಮತ್ತು ಬಜೆಟ್ ಮಂಡನೆಯ ಸಮಯದಲ್ಲಿ ಪ್ರಕಟಿಸಲಾದ ಕಾರ್ಯನೀತಿಗಳು ಮುಂಬರುವ ಮತ್ತು ಭಾವೀ ವರ್ಷಗಳಿಗಾಗಿನ ಮಧ್ಯಕಾಲೀನ ಆರ್ಥಿಕ ಯೋಜನೆಯಲ್ಲಿ ನಿರ್ದಿಷ್ಟ ಪಡಿಸಿರುವ ಉದ್ದೇಶಗಳು ಮತ್ತು ಗುರಿಗಳಿಗೆ ಸುಸಂಗತವಾಗಿರತಕ್ಕದ್ದು.

[1][(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮತ್ತು ಹಣಕಾಸು ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿಯನ್ನು ಒಳಗೊಂಡಂತೆ, ಅಧಿಸೂಚಿಸಬಹುದಾದ ಇತರ ಸರ್ಕಾರದ ಕಾರ್ಯದರ್ಶಿಗಳು ಸದಸ್ಯರಾಗಿರುವ ಆರ್ಥಿಕ ನಿರ್ವಹಣಾ ಪುನರೀಕ್ಷಣಾ ಸಮಿತಿಯನ್ನು ರಚಿಸಬಹುದು. ಅದು ರಾಜ್ಯದ ಹಣಕಾಸು ಮತ್ತು ಸಾಲದ ಸ್ಥಿತಿ ಗತಿಯನ್ನು ಮತ್ತು ತನ್ನ ಆರ್ಥಿಕ ಸರಿದೂಗಿಸುವಿಕೆಯ ಪಥದಲ್ಲಿ ರಾಜ್ಯದ ಪ್ರಗತಿಯನ್ನು ಪುನರೀಕ್ಷಿಸಲು ಮತ್ತು ಅಗತ್ಯವೆನಿಸಬಹುದಾದ ಸುಧಾರಕ ಕ್ರಮಗಳ ಬಗ್ಗೆ ಸಲಹೆ ನೀಡುವುದಕ್ಕಾಗಿ, ವರ್ಷಕ್ಕೆ ಕನಿಷ್ಠ ಎರಡು ಸಲ ಸಭೆ ಸೇರತಕ್ಕದ್ದು. ಪುನರೀಕ್ಷಣೆಯ ಪ್ರಕ್ರಿಯೆ ಮತ್ತು ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(2ಎ) ಆರ್ಥಿಕ ಇಲಾಖೆಯ ಪ್ರಭಾರ ಹೊಂದಿರುವ ಸಚಿವರು, ಪ್ರತಿ ಆರು ತಿಂಗಳಿಗೊಮ್ಮೆ ಬಜೆಟ್‌ಗೆ ಸಂಬಂಧಿಸಿದ ಸ್ವೀಕೃತಿಗಳು ಮತ್ತು ವೆಚ್ಚಗಳಲ್ಲಿನ ಪ್ರವೃತ್ತಿಗಳು, ಹಣಕಾಸು ನಿರ್ವಹಣಾ ಪುನರೀಕ್ಷಣಾ ಸಮಿತಿಯು ಶಿಫಾರಸ್ಸು ಮಾಡಿದಂತೆ ಬಜೆಟ್ ಗುರಿಗಳನ್ನು ಸಾಧಿಸಲು ಕೈಗೊಳ್ಳಬೇಕಾದ ಪರಿಹಾರ ಕ್ರಮಗಳನ್ನು ಪುನರೀಕ್ಷಿಸತಕ್ಕದ್ದು.

ಮತ್ತು ಅಂಥ ಪುನರೀಕ್ಷಣೆಗಳ ಪರಿಣಾಮವನ್ನು ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು. ಪುನರೀಕ್ಷಣಾ ವರದಿಯು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಇರತಕ್ಕದ್ದು.][1]

(3) ಪರಿಶೀಲನಾ ವರದಿಯಲ್ಲಿ ಈ ಮುಂದಿನ ವಿಷಯಗಳನ್ನು ವಿವರಿಸತಕ್ಕದ್ದು:-

(ಎ) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರದ ಮೇಲೆ ವಿಧಿಸಿರುವ ಬಾಧ್ಯತೆಗಳನ್ನು ಭರಿಸುವಲ್ಲಿ ಮಾಡಬಹುದಾದ ಯಾವುದೇ ಬದಲಾವಣೆ ಅಥವಾ ಸಂಭವವಿರುವ ಬದಲಾವಣೆ;

(ಬಿ) ಅಂಥ ಬದಲಾವಣೆಯು ಗಮನಾರ್ಹವಾಗಿದೆಯೇ ಮತ್ತು ಅದು ವಾಸ್ತವ ಅಥವಾ ಸಂಭಾವ್ಯ ಆಯವ್ಯಯ ಸಂಬಂಧವಾದ ಫಲಿತಾಂಶಗಳಿಗೆ ಸಂಬಂಧಿಸಿದೆಯೇ ಮತ್ತು ಈ ಬದಲಾವಣೆಯ ಎಷ್ಟು ಪ್ರಮಾಣವು ಸಾಮಾನ್ಯ ಆರ್ಥಿಕ ಪರಿಸ್ಥಿತಿಗೆ ಮತ್ತು ರಾಜ್ಯ ಸರ್ಕಾರವು ಮಾಡಿದ ಕಾರ್ಯನೀತಿ ಬದಲಾವಣೆಗಳಿಗೆ ಸಂಬಂಧಿಸಿದೆ; ಮತ್ತು

(ಸಿ) ರಾಜ್ಯ ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಪರಿಹಾರ ಕ್ರಮಗಳು.

(4) ರಾಜ್ಯ ಸರ್ಕಾರದ ಯಾವುದೇ ಹೊಸ ಕಾರ್ಯನೀತಿ ತೀರ್ಮಾನದಿಂದಾಗಿ ಒಂದು ನಿರ್ದಿಷ್ಟ ವರ್ಷಕ್ಕೆ ಸಂಬಂಧಿಸಿದಂತೆ ಪೂರ್ವ ನಿರ್ದಿಷ್ಟ ಮಟ್ಟಗಳಿಗಿಂತ ಆದಾಯದಲ್ಲಿ ಇಳಿತವಾಗುವ ಅಥವಾ ವೆಚ್ಚದಲ್ಲಿ ಹೆಚ್ಚುವರಿ ಉಂಟಾಗುವ ಕಾರಣದಿಂದ ಅದು ರಾಜ್ಯಸರ್ಕಾರದ ಅಥವಾ ಅದರ ಸಾರ್ವಜನಿಕ ವಲಯ ಉದ್ಯಮಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಾಗಲೆಲ್ಲ. ರಾಜ್ಯಸರ್ಕಾರವು, ಅಂಥ ಕಾರ್ಯನೀತಿ ತೀರ್ಮಾನ ಕೈಗೊಳ್ಳುವುದಕ್ಕೆ ಮೊದಲು, ಅಂಥ ಮೊಬಲಗುಗಳ ವಿನಿಯೋಗಕ್ಕಾಗಿ ಯಾವುದೇ ಅಧಿನಿಯಮದ ಅಡಿಯಲ್ಲಿ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರ ಪೈಕಿಯಿಂದ ಸಂದಾಯ ಮಾಡಲು ಮತ್ತು ವಿನಿಯೋಗಿಸಲು ಅಧಿಕೃತಗೊಳಿಸಲಾದ ಮೊಬಲಗುಗಳನ್ನು ಕಡಿತಗೊಳಿಸುವ ಮೂಲಕ ಅಥವಾ ರಾಜಸ್ವ ಹೆಚ್ಚಳಕ್ಕಾಗಿ ಮಧ್ಯಕಾಲೀನ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅಥವಾ ಇವೆರಡೂ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರಸಕ್ತ ಮತ್ತು ಮುಂಬರುವ ವರ್ಷಗಳಿಗಾಗಿ ಆರ್ಥಿಕ ಪರಿಣಾಮವನ್ನು ಸಂಪೂರ್ಣವಾಗಿ ಸರಿದೂಗಿಸಲು ಕ್ರಮಕೈಗೊಳ್ಳತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ, ಸಂವಿಧಾನದ 202ನೇ ಅನುಚ್ಛೇದದ (3)ನೇ ಖಂಡದ ಅಡಿಯಲ್ಲಿ ರಾಜ್ಯದ ಸಂಚಿತ ನಿಧಿಯ ಮೇಲೆ ಪ್ರಭೃತವಾದ ವೆಚ್ಚಕ್ಕೆ ಅನ್ವಯವಾಗತಕ್ಕದ್ದಲ್ಲ:

ಮತ್ತು ಪರಂತು, ಆರ್ಥಿಕ ಗುರಿಗಳನ್ನು ಪಾಲಿಸುವಾಗ, ರಾಜ್ಯಸರ್ಕಾರವು ಮಧ್ಯಕಾಲೀನ ಆರ್ಥಿಕ ಯೋಜನೆಯಲ್ಲಿ "ಹೆಚ್ಚಿನ ಆದ್ಯತೆಯ ಅಭಿವೃದ್ಧಿ ವೆಚ್ಚ" ಎಂದು (ಇತರೆ ವಿಷಯಗಳ ಜೊತೆಗೆ, ಪ್ರಾಥಮಿಕ ಶಿಕ್ಷಣ, ಮೂಲಭೂತ ಆರೋಗ್ಯ ಮತ್ತು ಗ್ರಾಮೀಣ ನೀರು ಸರಬರಾಜು) ಘೋಷಿಸಲಾದ ಕೆಲವು ವೆಚ್ಚಗಳಿಗೆ ಕಡಿತ ಗೊಳಿಸುವುದರಿಂದ ರಕ್ಷಣೆ ಒದಗಿಸಲು ಆದ್ಯತೆ ನೀಡುತ್ತದೆ ಅಥವಾ ತಗ್ಗಿಸಿರುವ ಅಥವಾ ಭಾಗಶಃವಾಗಿರುವ ಕಡಿತವನ್ನು ವಿಧಿಸಬಹುದು.

(5) ಒಂದು ಅಥವಾ ಹೆಚ್ಚು ಸಂಖ್ಯೆಯ ಪೂರಕ ಅಂದಾಜುಗಳನ್ನು ವಿಧಾನ ಮಂಡಲದ ಸದನಗಳ ಮುಂದೆ ಮಂಡಿಸಿದಾಗಲೆಲ್ಲಾ, ರಾಜ್ಯಸರ್ಕಾರವು, ಪ್ರಸಕ್ತ ವರ್ಷದ ಬಜೆಟ್ ಗುರಿಗಳಿಗೆ ಸಂಬಂಧಿಸಿದ ಮತ್ತು ಮುಂಬರುವ ವರ್ಷಕ್ಕಾಗಿನ ಮಧ್ಯಕಾಲೀನ ಆರ್ಥಿಕ ಯೋಜನೆಯ ಉದ್ದೇಶಗಳು ಮತ್ತು ಗುರಿಗಳಿಗೆ ಸಂಬಂಧಿಸಿದ ಪೂರಕ ಅಂದಾಜುಗಳ ಆರ್ಥಿಕ ಪರಿಣಾಮವನ್ನು ಪೂರ್ಣವಾಗಿ ಸರಿದೂಗಿಸಲು ವೆಚ್ಚದ ಸಂವಾದಿ ಕಡಿತವನ್ನು ಮತ್ತು / ಅಥವಾ ರಾಜಸ್ವ ಹೆಚ್ಚಳವನ್ನು ಸೂಚಿಸುವ ಒಂದು ವಿವರಣೆಯನ್ನು ಜೊತೆಯಲ್ಲೇ ಮಂಡಿಸತಕ್ಕದ್ದು.

1. 2011ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 19.03.2011 ರಿಂದ ಪ್ರತಿಯೋಜಿಸಲಾಗಿದೆ.

**7. ನಿಯಮಗಳನ್ನು ರಚಿಸಲು ಅಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಈಡೇರಿಸುವುದಕ್ಕಾಗಿ, ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಬಾಧಕ ವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (2)ನೇ ಉಪಪ್ರಕರಣದ ಮತ್ತು 5ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಕ್ಕಾಗಿ ಗೊತ್ತುಪಡಿಸ ಬೇಕಾದ ಆರ್ಥಿಕ ಸೂಚಿಗಳು;

(ಬಿ) 3ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ ಮತ್ತು 5ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮಧ್ಯಮಾವಧಿ ಆರ್ಥಿಕ ಯೋಜನೆಯ ನಮೂನೆ;

(ಸಿ) ಗೊತ್ತುಪಡಿಸಬೇಕಾದ ಅಥವಾ ಗೊತ್ತುಪಡಿಸಬಹುದಾದ ಇತರ ಯಾವುದೇ ವಿಷಯ.

**8. ನಿಯಮಗಳನ್ನು ವಿಧಾನಮಂಡಲದ ಮುಂದೆ ಮಂಡಿಸುವುದು.-** ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು, ಮತ್ತು ಈ ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಬಾರದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿ ಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಪ್ರತಿಕೂಲ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

**9. ಸದ್ಭಾವನೆಯಿಂದ ಕೈಗೊಳ್ಳುವ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳ ಅಡಿಯಲ್ಲಿ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಯಾವುದೇ ಕ್ರಮಕ್ಕಾಗಿ ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**10. ಇತರ ಕಾನೂನುಗಳ ಅನ್ವಯವು ಪ್ರತಿಷೇಧವಾಗಿರತಕ್ಕದ್ದಲ್ಲ.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅವುಗಳನ್ನು ನ್ಯೂನಗೊಳಿಸತಕ್ಕದ್ದಲ್ಲ.

**11. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** (1) ಈ ಅಧಿನಿಯಮದ ಉಪ ಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಕಂಡು ಬರಬಹುದಾದಂತೆ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುವ ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ರಚಿಸಬಹುದು:

[1][ಪರಂತು, ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2011ರ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.][1]

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

1. 2011ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 19.03.2011 ರಿಂದ ಪ್ರತಿಯೋಜಿಸಲಾಗಿದೆ.

*****

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ 17**

(2014ರ ಫೆಬ್ರವರಿ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿಮೊದಲು ಪ್ರಕಟವಾಗಿದೆ)

**ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2014**

(2014ರ ಫೆಬ್ರವರಿ ಇಪ್ಪತ್ತೆಂಟನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 2(ಸಿ)(ಜಿ) ಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.

**2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 21**

(2020ರ ಅಕ್ಟೋಬರ್ ತಿಂಗಳ 15ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2020**

(2020ರ ಅಕ್ಟೋಬರ್ ತಿಂಗಳ 14ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

ಪ್ರಕರಣ 4ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.

**2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 15**

(2021ರ ಮಾರ್ಚ್ ತಿಂಗಳ 29ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2021**

(2021 ರ ಮಾರ್ಚ್ ತಿಂಗಳ 29ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು 2021ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ (2002ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣದ (3)ನೇ ಉಪಪ್ರಕರಣದ ಆರನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ ನಾಲ್ಕರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್-19ರ ಪೂರ್ವದ ಹಂತಗಳಿಗೆ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು:

ಅಲ್ಲದೆ ಪರಂತು, 2021-22ರ ಆರ್ಥಿಕ ವರ್ಷದ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆಯು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 17**

(2022ರ ಮಾರ್ಚ್ ತಿಂಗಳ 31ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2022**

(2022ರ ಮಾರ್ಚ್ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತದ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 2022ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ (2002ರ ಕರ್ನಾಟಕ ಅಧಿನಿಯಮ 16) 4ನೇ ಪ್ರಕರಣದ (3)ನೇ ಉಪಪ್ರಕರಣದ ಹತ್ತನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡ 3.5ರಷ್ಟನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಕೋವಿಡ್ ಮತ್ತು ಒಮ್ಮೈಕ್ರಾನ್ ಪರಿಣಾಮದಿಂದ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜ್ಯ ರಾಜಸ್ವ ಕೊರತೆಯು ಉದ್ಭವಿಸಬಹುದು:

ಅಲ್ಲದೆ ಪರಂತು, 2022-23ರ ಆರ್ಥಿಕ ವರ್ಷದ ಅವಧಿಯಲ್ಲಿ ಒಟ್ಟು ಹೊಣೆಗಾರಿಕೆಯು ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ಇಪ್ಪತ್ತೈದರಷ್ಟನ್ನು ಮೀರಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ